ಕೃಷಿ ವಿಶ್ವವಿದ್ಯಾಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ಪಟ್ರೇನಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ: **28.03.14**

ಈ ವಾರದ ಮುನ್ಸೂಚನೆ (ದಿನಾಂಕ **29-03-14 to 02.03.14** ವರೆಗೆ)

ನಿಯತಾಂಕಗಳು	29.03.14	30.03.14	31.03.14	01.04.14	02.04.14
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	36	37	37	37	37
ಕನಿಷ್ಠ ಉಷ್ಣಾಂಶ (ಡಿ.ಸೆ.)	19	20	20	20	21
ಮೋಡ (ಪ್ರಮಾಣ)	2	2	2	2	3
ಅರ್ದ್ರತೆ ೭.೨೦ ಬೆ (ಶೇ)	37	40	58	72	62
ಅರ್ದ್ರತೆ ೨.೨೦ ಮ (ಶೇ)	11	14	13	17	18
ಗಾಳಿಯ ವೇಗ (ಕಿ.ಮಿ/ಗಂಟೆಗೆ)	6	7	7	6	5
ಗಾಳಿಯ ದಿಕ್ಕು (ಡಿಗ್ರಿ)	140	170	220	240	240

ಈ ವಾರದ ಮುನ್ಸೂಚನೆಯ ಪ್ರಕಾರ ಮುಂದಿನ ದಿನಗಳಲ್ಲಿ ಚಿಕ್ಕಬಳ್ಳಾಪುರ ಹಾಗೂ ಸುತ್ತಮುತ್ತ ಒಣಹವೆ ಮುಂದುವರಿಯಲಿದೆ. ದಿನದ ಗರಿಷ್ಠ ಉಷ್ಣಾಂಶವು **36.0-37.0°C** ಮತ್ತು ಕನಿಷ್ಠ **19-21°C** ಇರಲಿದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **37-72%** ಇದ್ದು, ಮಧ್ಯಾಹ್ನ **11-18%** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **5-7** ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ದನಕರುಗಳಿಗೆ ಕಾಲುಬಾಯಿ ಜ್ವರ ರೋಗದ ಭೀತಿ ಇರುವುದರಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮವಹಿಸಿ ಲಸಿಕೆ ಹಾಕಿಸುವುದು ಅತಿ ಅವಶ್ಯಕ.
- ದಿನೇ ದಿನೇ ಬಿಸಿಲಿನ ಝಳ ಹೆಚ್ಚಾಗುತ್ತಿರುವುದರಿಂದ ತರಕಾರಿ ಬೆಳೆಗಳಿಗೆ ಹೆಚ್ಚಿನ ನೀರನ್ನು ಪೂರೈಸಬೇಕು. ರಸ ಹೀರುವ ಕೀಟಗಳ ಹಾವಳಿ ಜಾಸ್ತಿ ಇರುವುದರಿಂದ 5% ಬೇವಿನ ಕಷಾಯ ಅಥವಾ ಇಮಿಡಾಕ್ಲೋಪ್ರಿಡ್ ಸಿಂಪಡಿಸಿ.
- ಚೆಂಡು ಹೂ: ಕೆಲವು ಕಡೆ ಪೋಷಕಾಂಶಗಳ ಕೊರತೆಯಿಂದ ಎಲೆಗಳು ಕಂದು ಅಥವಾ ಹಳದಿ ಬಣ್ಣಕ್ಕೆ ತಿರುಗುತ್ತವೆ. ಹತೋಟಿ ಮಾಡಲು ಬಯೋ–೨೦ ಸಿಂಪಡಿಸಬೇಕು ಅಥವಾ ಭೂಮಿಶಕ್ತಿ ಅಥವಾ ಮಹಾಫ್ಲೀಡ್ ಅನ್ನು ಹನಿ ನೀರಾವರಿ ಮೂಲಕ ಕೊಡಬೇಕು.

ಮಾರ್ಚ್ ತಿಂಗಳಲ್ಲಿ ಬೆಳೆಯಬಹುದಾದ ತಳಿಗಳು:

ರಾಗಿ: ಇಂಡಾಫ್ಲ್–೯, ಅಲಸಂದೆ: ಸಿ–152. ಉದ್ದು: ಕರೆಗಾಂವ್–೩, ಟಿ–9, ರಶ್ಮಿ. ಶಕ್ತಿಮಾನ್ ಮುಸುಕಿನ ಜೋಳ: ಸಿ.ಎಸ್.ಹೆಚ್–೫, ಸಿ.ಎಸ್.ಹೆಚ್–೯. ಅವರೆ: ಹೆಚ್,ಎ.–೩, ಹೆಚ್,ಎ.–೪. ತೋಟಗಾರಿಕೆ ಬೆಳೆಗಳು: ಬಾಳೆ, ಬೆಂಡೆ, ತಿಂಗಳ ಅವರೆ.

ಮಳೆ ಸಂಭವ ಇಲ್ಲದಿರುವುದರಿಂದ ತರಕಾರಿ ಬೆಳೆಗಳಿಗೆ ನೀರು ಹಾಯಿಸುವುದು ಅತಿ ಅವಶ್ಯಕ.

ರಸ ಹೀರುವ ಕೀಟಗಳ ನಿಯಂತ್ರಣಕ್ಕೆ 5% ಬೇವಿನ ಕಷಾಯ ಅಥವಾ ಇಮಿಡಾಕ್ಲೋಪ್ರಿಡ್ ಸಿಂಪಡಿಸಿ.

ಹೀರೇಕಾಯಿ ಅಥವಾ ಇತರೆ ತರಕಾರಿ ಬೆಳೆಗಳಲ್ಲಿ: ಲೀಫ್ ಮೈನರ್ ಹುಳು ಹೆಚ್ಚಾಗಿದ್ದರೆ ಅಬಾಮೆಕ್ಟಿನ್ (3 ಮಿ.ಲೀ/ಪ್ರತಿ 10 ಲೀಟರ್ ನೀರಿಗೆ) ಬೆರೆಸಿ ಸಿಂಪಡಿಸುವುದು.

ಕ್ಯಾಪ್ಸಿಕಂ: ಬೂದಿ ರೋಗಕ್ಕೆ ನೇಟಿವೋ ಅನ್ನು ಸಿಂಪಡಿಸಿ.

- ತರಕಾರಿ ಬೆಳೆಗಳಲ್ಲಿ ಕಂಡುಬರುವ ಬೂಜು ರೋಗ ನಿಯಂತ್ರಣಕ್ಕೆ ರಿಡೊಮಿಲ್/**Ridomil**+ಮ್ಯಾಂಕೊಜೆಬ್ (2 ಗ್ರಾಂ/ಪ್ರತಿ ಲೀಟರ್ ನೀರಿಗೆ) ಬೆರೆಸಿ ಸಿಂಪಡಿಸುವುದು.

ನೋಡಲ್ ಅಧಿಕಾರಿ:

ಡಾ.ಎಮ್.ಬಿ. ರಾಜೇಗೌಡ

ಬೆಂಗಳೂರು